

ಕೊಳದ ತಟದಲ್ಲಿ ಬಿಸಿಲು ಕಾಯಿಸಿಕೊಳ್ಳುತ್ತಿರುವ ಆಮೆಗಳು

ಇದಕ್ಕಾಗಿ ಪರಿಸರಾಸಕ್ತರು ಹಾಗೂ ತಜ್ಞರ ತಂಡ ವಾರಗಟ್ಟಲೆ ಕೊಳದ ಬಳಿ ಮೊಕ್ಕಾಂ ಹೂಡುತ್ತದೆ. ನಾಲ್ಕೈದು ಜನರ ತಂಡಗಳು ಕೊಳದ ಸುತ್ತಲೂ ಆಧುನಿಕ ಉಪಕರಣಗಳೊಂದಿಗೆ ಕೂರುತ್ತವೆ. ನೇರವಾಗಿ ಗುರುತಿಸುವ ವಿಧಾನದಲ್ಲಿ ಬೆಳಿಗ್ಗೆ 5ರಿಂದ 10 ಗಂಟೆಯವರೆಗೆ ದೃಷ್ಟಿಗೆ ತೋರುವ ಆಮೆಗಳನ್ನು ಗುರುತಿಸಲಾಗುತ್ತದೆ. ನೀರಿನ ಮೇಲ್ಮೈಯೊಳಗೆ ಇರುವ ಆಮೆಗಳನ್ನು ಉಪಕರಣಗಳ ನೆರವಿನಿಂದ ಗುರುತಿಸಲಾಗುತ್ತದೆ. ಇದಲ್ಲದೇ, ಕೊಳದ ತಟದಲ್ಲಿ ಕೂತು, ಆಹಾರ ಎಸೆದಾಗ ಆಮೆಗಳು ಸಮೀಪ ಬರುತ್ತವೆ. ಆಗ ಅವುಗಳನ್ನು ಹಿಡಿದು, ವಿವರ ದಾಖಲಿಸಲಾಗುತ್ತದೆ. ಪ್ರತಿಯೊಂದು ಪ್ರಭೇದದ ಸೂಕ್ಷ್ಮ ಮಾಹಿತಿಗಳನ್ನು ಬರೆದುಕೊಂಡು, ಮರಳಿ ಕೊಳಕ್ಕೆ ಬಿಡಲಾಗುತ್ತದೆ. ಈ ಒಟ್ಟಾರೆ ವಿವರಗಳನ್ನು ಕ್ರೋಡೀಕರಿಸಿ, ಆ ಕೊಳದಲ್ಲಿನ ಆಮೆಗಳ ಸಮಗ್ರ ಮಾಹಿತಿಯನ್ನು ಸಿದ್ಧಪಡಿಸಲಾಗುತ್ತದೆ.

ನಾಗಶಂಕರ ದೇವಸ್ಥಾನದ ಕೊಳದಲ್ಲಿ ಹತ್ತಾರು ತಳಿಗಳ ಆಮೆಗಳನ್ನು ಗುರುತಿಸಲಾಗಿದೆ. ಹೊರಜಗತ್ತಿನಲ್ಲಿ ಅಳಿವಿನ ಅಂಚಿನಲ್ಲಿರುವ ಕೆಲವು ತಳಿಗಳ ಆಮೆಗಳು ಇಲ್ಲಿವೆ! ಹೀಗಾಗಿ ಇಲ್ಲಿ ಮೊಟ್ಟೆಯೊಡೆದು ಹೊರಬರುವ ಮರಿಗಳನ್ನು ನದಿಗೆ ಬಿಟ್ಟು, ಅವುಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಲೇ ಇವೆ.

ನದಿಯಲ್ಲಿ ಜೀವಿಸುವ ಮೂರು ಕುಟುಂಬಗಳ ಒಂಬತ್ತು ಅಪರೂಪದ ಪ್ರಭೇದಗಳ ಆಮೆಗಳನ್ನು ನಾಗಶಂಕರ ದೇಗುಲದ ಕೊಳದಲ್ಲಿ ತಜ್ಞರು ಗುರುತಿಸಿದ್ದಾರೆ. ಅವುಗಳೆಂದರೆ: ನಿಲ್ಸೋನಿಯಾ ಹರುಮ್, ಪಾಂಗ್ಶುರಾ ಟೆಕ್ಟಾಂಡ್, ನಿಲ್ಸೋನಿಯಾ ನೈಗ್ರಿಕಾನ್ಸ್, ಇಂಡೊಟೆಸ್ಟುಡೊ ಎಲಂಗೇಟ್, ಪಾಂಗ್ಶುರಾ ಟೆಂಟೋರಿಯಾ, ಲೆಸೆನಿಸ್ ಪಂಕ್ಟಟಾ, ನಿಲ್ಸೋನಿಯಾ ಗಾಂಗೆಟಿಕಸ್, ಪಾಂಗ್ಶುರಾ ಸಿಲೆಟೆನ್ಸಿಸ್ ಹಾಗೂ ಸೈಕ್ಲಿಮಿಸ್ ಡೆಂಟಟಾ. ಈ ಒಂಬತ್ತು ತಳಿಗಳ ಸಾವಿರ ಸಾವಿರ ಆಮೆಗಳು ಇಲ್ಲಿವೆಯಂತೆ!

ಉಳಿದಂತೆ, ‘ಪ್ರಕೃತಿ ಸಂರಕ್ಷಣೆಯ ಅಂತರರಾಷ್ಟ್ರೀಯ ಒಕ್ಕೂಟ’ (ಐಯುಸಿಎನ್) ಪ್ರಕಟಿಸಿರುವ ವರದಿಯ ಅನುಸಾರ, ಕೊಳದಲ್ಲಿರುವ ಮೃದು ಚಿಪ್ಪಿನ ‘ಚಿತ್ರಾ ಇಂಡಿಕಾ’ ಹಾಗೂ ‘ನಿಲ್ಸೋನಿಯಾ ಜಿಜಾಂಟಿಕಾ’ (ಇಂಡಿಯನ್ ಸಾಫ್ಟ್‌ಶೆಲ್) ಆಮೆಗಳನ್ನು ‘ಅಳಿವಿನ ಅಂಚಿನಲ್ಲಿರುವ ಪ್ರಭೇದ’ಗಳೆಂದು ಘೋಷಿಸಲಾಗಿದೆ.

ಹೊಂಡದ ನಾಲ್ಕೂ ದಂಡೆಗಳ ಮೇಲ್ಭಾಗದಲ್ಲಿ ಸಿಮೆಂಟ್ ಕಟ್ಟೆ ಕಟ್ಟಿ ಗಟ್ಟಿಗೊಳಿಸಲಾಗಿದೆ. ಉಳಿದಂತೆ ಒಳ ಹಾಗೂ ತಳಭಾಗವೆಲ್ಲ ಮಣ್ಣಿನದೇ ಆಗಿದೆ. ಬೇಸಿಗೆಯ ಮೂರ್ನಾಲ್ಕು ತಿಂಗಳ ಕಾಲ ಕೊಳದಲ್ಲಿನ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಜೂನ್‌ನಿಂದ ಮಾನ್ಸೂನ್ (ವಾರ್ಷಿಕ ಸರಾಸರಿ ಮಳೆ ಪ್ರಮಾಣ 3500 ಮಿ.ಮೀ.) ಶುರುವಾಗುತ್ತಲೇ, ಎತ್ತರದ ಭಾಗದಿಂದ ಮಳೆನೀರು ನೆಲದೊಳಗೆ ಜಿನುಗಿ, ಕೊಳದಲ್ಲಿನ ಮಟ್ಟ ಏರುತ್ತದೆ. ಬೇಸಿಗೆಯಲ್ಲಿ ತಾಪಮಾನ 32 ಡಿ.ಸೆ.ವರೆಗೆ ಏರಿದರೆ, ಚಳಿಗಾಲದಲ್ಲಿ 3ರಿಂದ 5 ಡಿ.ಸೆ.ವರೆಗೆ ಕಡಿಮೆಯಾಗುತ್ತದೆ. ಈ ಎರಡೂ ವ್ಯತಿರಿಕ್ತ ಹವಾಮಾನದಲ್ಲಿ ಆಮೆಗಳು ಬದುಕುವುದು ಇಲ್ಲಿನ ವಿಶೇಷ.

ಅನತಿ ದೂರದಲ್ಲಿ ಬ್ರಹ್ಮಪುತ್ರ ನದಿ ಇದ್ದರೆ, ಮೇಲ್ಭಾಗದಲ್ಲಿ ಭತ್ತದ ಗದ್ದೆಗಳಿವೆ. ಮೇಲಾಗಿ, ವರ್ಷದ ಏಳೆಂಟು ತಿಂಗಳು ಸುರಿಯುವ ಮಳೆ. ಇದೆಲ್ಲ ಕಾರಣದಿಂದ, ನಾಗಶಂಕರ ಕೊಳದಲ್ಲಿ ನೀರು ಕಡಿಮೆಯಾಗಿದ್ದೇ ಇಲ್ಲ. ದೇಗುಲದ ಕೊಳ ಆಗಿರುವುದರಿಂದ, ಆಮೆಗಳಿಗೆ ಹಾನಿ ಉಂಟು ಮಾಡಲು ಯಾರೂ ಮುಂದಾಗುವುದಿಲ್ಲ! ಹೀಗಾಗಿ ಆಮೆಗಳ ಸಂತತಿ ವೃದ್ಧಿಯಾಗುತ್ತಲೇ ಹೋಗುತ್ತಿದೆ. ಈಶಾನ್ಯ ಭಾರತದಲ್ಲಿ ಆಮೆಗಳ ಸಂರಕ್ಷಣೆ ಮಾಡುವ ಸ್ವಯಂಸೇವಾ ಸಂಸ್ಥೆಗಳು, ಅಳಿವಿನ ಅಂಚಿನಲ್ಲಿರುವ ಪ್ರಭೇದದ ಆಮೆಗಳನ್ನು ಸಂರಕ್ಷಿಸಿ, ಅವುಗಳ ಸಂಖ್ಯೆ ಹೆಚ್ಚಿಸಲು ಈ ಕೊಳವನ್ನೇ ಆಶ್ರಯಿಸಿವೆ.

‘ಆಮೆಗಳನ್ನು ರಕ್ಷಿಸುವ ತಂಡಗಳು ಇಲ್ಲಿಗೆ ಬರುತ್ತಲೇ ಇರುತ್ತವೆ. ನಮಗೆ ಆ ಬಗ್ಗೆ ಹೆಚ್ಚೇನೂ ಗೊತ್ತಿಲ್ಲ. ಆದರೆ ಎಂಟೋ ಹತ್ತೋ ಮೊಟ್ಟೆಗಳನ್ನು ತಂದು ಈ ಕೊಳದ ದಂಡೆಯ ಮಣ್ಣಿನಲ್ಲಿ ಇಟ್ಟು, ಅವು ಮರಿಯಾಗಿ ಹೊರಬರುವ ತನಕ ಉಸ್ತುವಾರಿ ವಹಿಸುವ ಅವರ ಕಾಳಜಿ ನೋಡಿ ನಮಗೆ ಅಚ್ಚರಿಯಂತೂ ಆಗುತ್ತದೆ’ ಎಂದು ಮಳಿಗೆಯೊಂದರ ವ್ಯಾಪಾರಿ ದೀನ್ ದಾಸ್ ಅಭಿಪ್ರಾಯಪಟ್ಟ. ಪ್ರವಾಸಿಗರು ಮತ್ತು ಭಕ್ತರಿಗೆ ಆಹಾರದ ಪೊಟ್ಟಣ ಮಾರಾಟ ಮಾಡುವುದೇ ದಾಸ್‌ನ ಆದಾಯದ ಮೂಲ!

ಆತನಿಂದ ಅಷ್ಟೇನೂ ದುಬಾರಿಯಲ್ಲದ ಒಣತಿನಿಸುಗಳ ಪಾಕೆಟ್ ಹಿಡಿದುಕೊಂಡು, ಕೊಳದ ಮೂಲೆಯಲ್ಲಿ ಇಳಿಯುತ್ತಿದ್ದಾಗ ಯಾರೋ ಸಂಕೇತ ಕೊಟ್ಟಿದ್ದಾರೇನೋ ಎಂಬಂತೆ ಆರೆಂಟು ದೊಡ್ಡ ಆಮೆಗಳ ಗುಂಪು ನಮ್ಮತ್ತಲೇ ಮೆಲ್ಲಗೆ ಬರತೊಡಗಿತು. ಅಷ್ಟು ದೊಡ್ಡ ಆಮೆಗಳನ್ನು ಎಂದಿಗೂ ಅಷ್ಟೊಂದು ಸನಿಹದಿಂದ ನೋಡಿರದ ನಾವು ಒಂದರೆಕ್ಷಣ ಗಾಬರಿಯಾಗಿದ್ದಂತೂ ನಿಜ!

ಪ್ರತಿಕ್ರಿಯಿಸಿ: **feedback@sudha.co.in**